# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ :- 06/03/2021 ರಂದು ವಾರ್ಡ್-31ರ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿ**

**ಸಭೆಗೆ ಹಾಜರಿದ್ದ ಅಧಿಕಾರಿಗಳು ಮತ್ತು ಸಾರ್ವಜನಿಕರು :-**

1. ಶ್ರೀ. ಶ್ರೀ.ರವಿವಡ್ಡರ್, ನೋಡಲ್ ಅಧಿಕಾರಿ
2. ಶ್ರೀ. ಬಸವರಾಜು ವಾರ್ಡ್ ಅಭಿಯಂತರರು
3. ಶ್ರೀ. ವಿನಯ ಕಿರಿಯ ಆರೋಗ್ಯ ಪರೀವಿಕ್ಷಕರು
4. ಶ್ರೀ. ರಾಹುಲ್, ಸಿವಿಲ್ ಇಂಜಿನೀಯರ್ ಬಿ.ಡಬ್ಲ್ಯೂ.ಎಸ್.ಎಸ್.ಬಿ
5. ಶ್ರೀ ಖಿಮರ್ ಪಾಷ, ಅನ್ವರ್ ಲೇಔಟ್
6. ಶ್ರೀ ರಾಘವೇಂದ್ರ, ಅಶೋಕ ನಗರ
7. ಶ್ರೀ ಆಲಿ, ಅನ್ವರ್ ಲೇಔಟ್
8. ಶ್ರೀ ಮುರಳಿ, ಅಶೋಕ ನಗರ
9. ಶ್ರೀ ಸಲೀಮ್ ಕುಶಾಲನಗರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೋಡಲ್ ಅಧಿಕಾರಿರವರು ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು. ವಾರ್ಡ್-31 ರ ವಾರ್ಡ್ ಸಮಿತಿ ಸಭೆಯನ್ನು ತಮಿಳ್ ಸಂಘ ಸ್ಕೂಲ್‌ನಲ್ಲಿ ನಡೆಸಲಾಯಿತು. ನೋಡಲ್ ಅಧಿಕಾರಿಗಳು ವಾರ್ಡ್‌ನ ಸಾರ್ವಜನಿಕರ ಕುಂದು ಕೊರತೆಗಳನ್ನು ಸದಸ್ಯರು ಮತ್ತು ಅಧಿಕಾರಿಗಳ ಜೋತೆಯಲ್ಲಿ ಚರ್ಚಿಸಿದರು ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳವ ಬಗ್ಗೆ ಸಂಬಂದಪಟ್ಟ ಅಧಿಕಾರಿ ಹಾಗೂ ನೌಕರರುಗಳಿಗೆ ಈ ಕೆಳಕಂಡತೆ ತಿಳಿಸಲಾಗಿರುತ್ತದೆ.

➤ **ಕಾಮಗಾರಿ ಇಲಾಖೆಗೆ ಸಂಬಂದಿಸಿರುವುದು**

1. ವಾರ್ಡ್ ವ್ಯಾಪ್ತಿಯಲ್ಲಿ ಪ್ರಾರಂಭಗೊಂಡಿರುವ ಕಾಮಗಾರಿಗಳನ್ನು ಶಿಘ್ರದಲ್ಲೆ ಪೂರ್ಣಗೊಳಿಸಲು ಸೂಚಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಫೂಟ್ಪಾತ್ ಒತ್ತುವರಿ ಮಾಡಿಕೊಂಡಿರುವವರನ್ನು ಕೂಡಲೆ ತೆರುಗೊಳಿಸಲು ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವಂತಹ ಸಮಸ್ಯೆಗಳಿಗೆ ಪರಿಹರಿಸುವಂತೆ ವಾರ್ಡ್ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು**

**ಘನತ್ಯಾಜ್ಯ ಇಲಾಖೆಗೆ ಸಂಬಂದಿಸಿರುವುದು**

1. ಕಿರಿಯ ಆರೋಗ್ಯ ಪರೀವಿಕ್ಷಕರುಇಂದಿನ ಸಭೆಯಲ್ಲಿ ಎದ್ದುನಿಂತು ಇಂದು 54–ಪೌರಕಾರ್ಮಿಕರು, 12–ಆಟೋ, 3–ಕಾಂಪ್ಯಾಕ್ಟರ್ ಹಾಜರಾಗಿವೆ ಎಂದು ತಿಳಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಕಸ ವಿಗಂಡನೆ ಹಾಗೂ ವಿಂಗಡಣೆ ವಿಲೇವಾರಿ ಸರಿಯಾಗಿ ನಿರ್ವಹಣೆಯಾಗುತ್ತಿಲ್ಲ ಕೂಡಲೆ ಹಸಿ ತ್ಯಾಜ್ಯ ಮತ್ತು ಒಣತ್ಯಾಜ್ಯ ವಿಗಂಡಣೆ ಮಾಡಲು ಸೂಚಿಸಿದರು.

**ಕ್ರಮ ಕಿರಿಯ ಆರೋಗ್ಯ ಪರೀವಿಕ್ಷಕರು ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಕೂಡಲೆ ಕ್ರಮ ವಹಿಸಲು ಸೂಚಿಸಿದರು.**

➢ **ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಿಸಿರುವುದು**

1. ವಾರ್ಡ್ ವ್ಯಾಪ್ತಿಯಲ್ಲಿನ ಶಾಂಪುರ ಮುಖ್ಯ ರಸ್ತೆಯಲ್ಲಿ ಸ್ಯಾನಿಟರಿ ಕಾಮಗಾರಿ ನಿರ್ವಹಿಸಿದ್ದು ರಸ್ತೆಯಲ್ಲಿರುವ ಮಣ್ಣನ್ನು ತೇರುವುಗೊಳಿಸಿ ವೆಟ್ ಮಿಕ್ಸ್ ಹಾಕಲು ಸೂಚಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ಮನೆಗೆ ವಾಟರ್ ಮೀಟರ್ ಹೆಚ್ಚಿನ ಸಂಖ್ಯೆಯಲ್ಲಿ ಹಾಕಿಸಿಕೊಳ್ಳಲು ಸಾರ್ವಜನಿಕರಿಗೆ ಅರಿವು ಮೂಡಿಸಲು ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವಂತಹ ಸಮಸ್ಯೆಗಳನ್ನು ಪರಿಹರಿಸುವಂತೆ ಸಹಾಯಕ ಅಭಿಯಂತರರಿಗೆ ಈ ಸಭೆ ಮುಖಾಂತರ ಸೂಚಿಸಲಾಯಿತು.**

➢ **ಸ್ಟ್ರೀಟ್ ಲೈಟ್ ಇಲಾಖೆಗೆ ಸಂಬಂದಿಸಿರುವುದು**

1. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಹೆಚ್ಚಾಗಿ ರೀಪೇರಿಗಳಿಗೆ ಒಳಗಾಗುತ್ತಿದ್ದು ಕೂಡಲೆ ಕಾರ್ಯಾಚರಣೆ ಹಾಗೂ ಬೀದಿ ದೀಪ ನಿರ್ವಹಣೆ ಬಗ್ಗೆ ಅಥವಾ ಕುಂದು ಕೋರತೆಗಳನ್ನು ಹಾಲಿಸಲು ಈ ಇಲಾಖೆಯಿಂದ ಯಾವದೇ ಅಧಿಕಾರಿ ವರ್ಗದವರು ಹಾಜರಿರದ ಕಾರಣ ಮುಂದಿನ ಸಭೆಯಲ್ಲಿ ತಪ್ಪದೆ ಹಾಜರಾಗಲು ಸೂಚಿಸಿದರು.

➢ **ಪೊಲೀಸ್ ಇಲಾಖೆಗೆ (ಟ್ರಾಫಿಕ್) ಸಂಬಂದಿಸಿರುವುದು**

2. ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ವಾಹನಗಳ ನೀಲುಗಡೆ, ನಿರ್ಜೀವವಾದ ವಾಹನಗಳ (Dead Vehical) ತೆರುವುಗೊಳಿಸುದು...ಇತೆರೆ ಸಮಸ್ಯೆಗಳು ಪಾಲಿಸಲು ಪೊಲೀಸ್ ಇಲಾಖೆ ಸಭೆಗೆ ಹಾಜಾರಾದೆ ಇರುವ ಕಾರಣದಿಂದ ಮುಂದಿನ ಸಭೆಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಕೇಳಿಸಿಕೊಳ್ಳಲು ತಪ್ಪದೆ ಸಭೆಗೆ ಹಾಜರಾಲು ಸೂಚಿಸಿದೆ.

ಈ ಎಲ್ಲಾ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಂಬಂದಪಟ್ಟವರಿಗೆ ಸೂಚಿಸುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದೆ.

**ಸದಸ್ಯ ಕಾರ್ಯದರ್ಶಿ ವಾರ್ಡ್ –31** | **ನೋಡಲ್ ಅಧಿಕಾರಿ ವಾರ್ಡ್–31**

**ಪ್ರತಿಗಳನ್ನು:**

- ❖ ಮಾನ್ಯ ಆಡಳಿತಾಧಿಕಾರಿರವರ ಆಪ್ತ ಶಾಖೆಗೆ ಸಲ್ಲಿಸಿ ಆಡಳಿತಾಧಿಕಾರಿರವರ ಗಮನಕ್ಕೆ ತರಲು ಕೊರಿದೆ.
- ❖ ಮಾನ್ಯ ಆಯುಕ್ತರುರವರ ಆಪ್ತಶಾಖೆಗೆ ಸಲ್ಲಿಸಿ ಆಯುಕ್ತರವರ ಗಮನಕ್ಕೆ ತರಲು ಕೊರಿದೆ

- ❖ ಮಾನ್ಯ ವಲಯ ಆಯುಕ್ತರುರವರ ಅಪ್ತಶಾಖೆಗೆ ಸಲ್ಲಿಸಿ ಆಯುಕ್ತರವರ ಗಮನಕ್ಕೆ ತರಲು ಕೋರಿದೆ.
- ❖ ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರ ಅಪ್ತಶಾಖೆಗೆ ಸಲ್ಲಿಸಿ ಅಯುಕ್ತರವರ ಗಮನಕ್ಕೆ ತರಲು ಕೋರಿದೆ.
- ❖ ಮುಖ್ಯ ಅಭೀಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
- ❖ ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
- ❖ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಜಿ.ಹಳ್ಳಿ ಉಪ-ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
- ❖ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ) ಪುಲಕೇಶಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
- ❖ ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ನೇತಾಜಿ ರಸ್ತೆ, ರವರ ಮಾಹಿತಿಗಾಗಿ ಸಲ್ಲಿಸಿದೆ.
- ❖ ಸಹಾಯಕ ಕಾರ್ಯಪಾಲಕ ಅಭಿಯಂತರರು (ಸ್ಟ್ರೀಟ್ ಲೈಟ್) ಮೇಯೋಹಾಲ್ ರವರ ಮಾಹಿತಿಗಾಗಿ ಸಲ್ಲಿಸಿದ
- ❖ ವಲಯ ಅರಣ್ಯಾಧಿಕಾರಿಗಳು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
- ❖ ಪೊಲೀಸ್ ಇನ್ಸ್‌ಪೆಕ್ಟರ್ (ಟ್ರಾಫಿಕ್) ಕೆ.ಜಿ.ಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
- ❖ ಕಛೇರಿ ಪ್ರತಿ.